**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 17.12.2025.**

**ಮುಂದುವರೆದ ಪಾಟೀ ಸವಾಲು : ಶ್ರೀ ಎನ್.ಎನ್. ಆರೋಪಿ ಪರ ವಕೀಲರಿಂದ**

ಆರೋಪಿ ಮತ್ತು ಆತನ ಕುಟುಂಬದವರು ನನ್ನ ಮನಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ಈ ಚೆಕ್ಕಿನ ವ್ಯವಹಾರ ಆರೋಪಿ ಮತ್ತು ನನ್ನ ಅಣ್ಣನಾದ ವೇಣು ನಡೆದಿತ್ತು ಎಂದರೆ ಸರಿಯಲ್ಲ. ಹಾಗಾಗಿ ಆರೋಪಿಯು ನಿಪಿ-1 ಚೆಕ್ಕನ್ನು ವೇಣುರವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿಯು ವೇಣುರವರಿಂದ ಪಡೆದಿದ್ದ ರೂ. 5,00,000/- ಹಣವನ್ನು ವೇಣುರವರಿಗೆ ಹಿಂತಿರುಗಿಸಿದ್ದಾರೆ ಎಂದರೆ ಸರಿಯಲ್ಲ. ಆದರೂ ಸಹ ನಿಪಿ-1 ಚೆಕ್ಕನ್ನು ಆರೋಪಿಗೆ ವಾಪಸ್ಸು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ನನ್ನ ಅಣ್ಣ ನನ್ನ ಮುಖಾಂತರ ಈ ಸುಳ್ಳು ಫಿರ್ಯಾದನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ನಿಪಿ-1 ಚೆಕ್ಕನ್ನು ಆರೋಪಿಯೇ ಬರೆದಿದ್ದಾರೆ. ಚೆಕ್ಕಿನ ವಿವರಗಳನ್ನು ನಾನೇ ಬರೆದಿದ್ದೇನೆ ಎಂದರೆ ಸರಿಯಲ್ಲ.

ನಾನು ಆರೋಪಿಗೆ ಕಳುಹಿಸಿದ್ದ ನೋಟೀಸು ಜಾರಿ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-3 ರ ಅಂಚೆ ಸ್ವೀಕೃತಿಯಲ್ಲಿರುವ ಸಹಿ ಆರೋಪಿಯದಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಸಹಿ ಆರೋಪಿಯದಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯಿಂದ ರೂ. 5,00,000/-ಹಣ ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಆರೋಪಿಗೆ 500 ಮುಖಬೆಲೆಯ ನೋಟುಗಳನ್ನು ನೀಡಿದ್ದೇನೆ. ಎಷ್ಟು ಬಂಡಲುಗಳನ್ನು ನೀಡಿದ್ದೇನೆ ಗೊತ್ತಿಲ್ಲ. ಆರೋಪಿಯು ನಿಪಿ-1 ಚೆಕ್ಕು ಸಂಬಂಧಿಸಿದ ಖಾತೆಯ ಚೆಕ್ಕು ಪುಸ್ತಕ ಕಳೆದು ಹೋಗಿದೆ ಎಂದು ಬ್ಯಾಂಕಿಗೆ ಅರ್ಜಿ ನೀಡಿದ್ದೀರಾ ಎಂದರೆ

ಸರಿಯಲ್ಲ. ಆರೋಪಿಯು ಪೊಲೀಸ್ ಇಲಾಖೆಯಲ್ಲಿದ್ದು, ಆತನಿಗೆ ಮಾಸಿಕ ರೂ. 55,000/- ಸಂಬಳ ಬರುತ್ತದೆ, ಹಾಗಾಗಿ ಆತನಿಗೆ ನನ್ನಿಂದ ಸಾಲ ಪಡೆಯು ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಆರೋಪಿಯು ತನ್ನ ತಂದೆ-ತಾಯಿಯ ಅನಾರೋಗ್ಯದ ಕಾರಣ ಹಣ ಪಡೆದಿದ್ದೆ ಎಂದು ನುಡಿಯುತ್ತಾರೆ. ಆರೋಪಿ ನನಗೆ ಚೆಕ್ಕು ನೀಡಿಲ್ಲ ಮತ್ತು ಆರೋಪಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ,

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.